**O. S. No:340/2023**
**PW:1**

(ಇಂದು ದಿನಾಂಕಃ **28-04-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಪಿ ಎಚ್ ಕೆ ವಕೀಲರಿಂದಃ**

ಈ ದಾವೆಯನ್ನು ನಾನು ಹಾಗೂ ನನ್ನ ಸಹೋದರಿ ಸೇರಿ ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತೇನೆ. ಈ ದಾವೆಯನ್ನು ದಾವಾ ಆಸ್ತಿಯಲ್ಲಿ ಪಾಲು ಕೋರಿ ಸಲ್ಲಿಸಿರುತ್ತೇನೆ. ಈ ದಾವೆಯನ್ನು 4 ಜಮೀನುಗಳು ಹಾಗೂ 1 ಮನೆಗೆ ಸಂಬಂಧಿಸಿ ಸಲ್ಲಿಸಿರುತ್ತೇನೆ. ದಾವಾ ಆಸ್ತಿಗಳು ಮೊದಲಿಗೆ ನನ್ನ ಅಜ್ಜನಿಗೆ ಸಂಬಂಧಿಸಿದ್ದು ನಂತರ ನನ್ನ ತಂದೆಗೆ ಬಂದಿರುತ್ತವೆ. ನನ್ನ ತಂದೆ ಹಾಗೂ ತಾಯಿ ಈಗ ಮೃತಪಟ್ಟಿರುತ್ತಾರೆ. ನನ್ನ ತಂದೆ ಹಾಗೂ ತಾಯಿಯ ಮರಣದ ನಂತರ ನಾನು, ಸಹೋದರ ಹಾಗೂ ಸಹೋದರಿಯರು ದಾವಾ ಆಸ್ತಿಗಳನ್ನು ಪಾಲು ವಿಭಾಗಗಳನ್ನು ಮಾಡಿಕೊಂಡಿರುವುದಿಲ್ಲ. ನನ್ನ ತಂದೆ ಮೃತಪಟ್ಟ ನಂತರ ನನ್ನ ಅಣ್ಣ ಹನಮರಡ್ಡಿಯವರು ದಾವಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರು. ಸದರಿ ಹನಮರಡ್ಡಿಯವರು ಮೃತಪಟ್ಟ ನಂತರ ಈಗ ದಾವಾ ಆಸ್ತಿಗಳನ್ನು ನಾವೆಲ್ಲರೂ ಸೇರಿ ನೋಡಿಕೊಳ್ಳುತ್ತಿದ್ದೇವೆ. ನನಗೆ ದಾವಾ ಆಸ್ತಿಯಲ್ಲಿ ಇರುವಷ್ಟೇ ಹಕ್ಕು 2 ರಿಂದ 4 ನೇ ಪ್ರತಿವಾದಿಯರಿಗೆ ಇದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**